# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 37 |
| ಸದಸ್ಯರ ಹೆಸರು | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) |
| ಉತ್ತರಿಸಬೇಕಾದ ದಿನಾಂಕ | 27.01.2026 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

<table>
<tr><th>ಕ್ರ.<br>ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ</td><td>ಕೊಡಗು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು; ಮತ್ತು ಯಾವುವು; (ತಾಲ್ಲೂಕುವಾರು ನೀಡುವುದು)</td><td>ಕೊಡಗು ಜಿಲ್ಲೆಯಲ್ಲಿ 14 ಸ್ಟೋನ್ ಕ್ರಷರ್ ಪರವಾನಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ.<br><br>ತಾಲೂಕುವಾರು ವಿವರ;<br><table><tr><th>ಕ್ರ.ಸಂ</th><th>ತಾಲೂಕು</th><th>ಮಂಜೂರಾದ ಕ್ರಷರುಗಳ ಸಂಖ್ಯೆ</th></tr><tr><td>1</td><td>ಮಡಿಕೇರಿ</td><td>01</td></tr><tr><td>2</td><td>ಕುಶಾಲನಗರ</td><td>09</td></tr><tr><td>3</td><td>ವಿರಾಜಪೇಟೆ</td><td>02</td></tr><tr><td>4</td><td>ಸೋಮವಾರಪೇಟೆ</td><td>02</td></tr></table></td></tr>
<tr><td>ಆ</td><td>ಜನವಸತಿ ಪ್ರದೇಶಗಳಿಂದ ಎಷ್ಟು ಮೀಟರ್ ಗಳ ಅಂತರದಲ್ಲಿ ಕ್ರಷರ್ ಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ;</td><td>ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ-2011ರ ಕಲಂ-6 ಪ್ರಮುಖ ಷರತ್ತು ಮತ್ತು ನಿಬಂಧನೆಗಳು: -<br>1. ಕ್ರಷರ್ ಸುರಕ್ಷಿತ ವಲಯವು ರಾಷ್ಟ್ರೀಯ ಹೆದ್ದಾರಿ/ ರಾಜ್ಯ ಹೆದ್ದಾರಿಯಿಂದ 200 ಮೀಟರ್ ಅಂತರ ಇರತಕ್ಕದ್ದು.<br>2. ಜಿಲ್ಲಾ ಮುಖ್ಯ ರಸ್ತೆಗಳಿಂದ 100 ಮೀಟರ್ ಹಾಗೂ ಇತರೆ ರಸ್ತೆಗಳಿಂದ 50 ಮೀಟರ್ ಅಂತರ ಇರತಕ್ಕದ್ದು.<br>3. ಗ್ರಾಮ, ಶಾಲೆ, ದೇವಸ್ಥಾನಗಳಿಂದ 500 ಮೀಟರ್. ಅಂತರ ಇರತಕ್ಕದ್ದು.<br>4. ನಗರ ಸಭೆ, ಪುರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಿಂದ ಹೊರಗೆ ಇರತಕ್ಕದ್ದು.</td></tr>
<tr><td>ಇ</td><td>ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ- 2011ರ ಕಾಯ್ದೆ ಜಾರಿಯಾಗುವ ಮೊದಲು ಜನವಸತಿ ಪ್ರದೇಶಗಳಿಂದ ಎಷ್ಟು ಮೀಟರ್ ಅಂತರದಲ್ಲಿ ಕ್ರಷರ್‌ಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿತ್ತು.</td><td>• ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ-2011 ಜಾರಿಯಾಗುವ ಪೂರ್ವದಲ್ಲಿ ಸ್ಟೋನ್ ಕ್ರಷರ್ ಘಟಕಗಳ ಸ್ಥಾಪನೆಗೆ ಲೈಸೆನ್ಸ್‌ಗಳ ಮಂಜೂರಾತಿಗೆ ಯಾವುದೇ ಕಾಯ್ದೆ ಮತ್ತು ನಿಯಮಗಳು ಜಾರಿಯಲ್ಲಿ ಇರಲಿಲ್ಲ.<br>• ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ-2011 ಜಾರಿಯಾಗುವ ಪೂರ್ವದಲ್ಲಿ ಸ್ಟೋನ್ ಕ್ರಷರ್ ಘಟಕಗಳ ಸ್ಥಾಪನೆಗೆ ಮಾಲೀಕರುಗಳು **Water (prevention and Control**</td></tr>
</table>

| | | |
|---|---|---|
| | | of Pollution) Act, 1974 and Air (prevention and Control of Pollution) Act, 1981 ರನ್ವಯ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ **Consent of Establishment (CFE)** ಹಾಗೂ **Consent for Operation (CFO)** ಪಡೆದು ಸ್ಟೋನ್ ಕ್ರಷರ್ ಘಟಕಗಳ ಸ್ಥಾಪಿಸಿ ಜಿಲ್ಲಾ ಕೈಗಾರಿಕೆ ಇಲಾಖೆಯಿಂದ ಅನುಮತಿ ಪಡೆದು ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಸದರಿ ಅವಧಿಯಲ್ಲಿ ಜನವಸತಿ ಪ್ರದೇಶಗಳಿಂದ ಘಟಕಗಳ ಸ್ಥಾಪನೆಗೆ ಯಾವುದೇ ಅಂತರ ನಿಗಧಿಪಡಿಸಿರುವುದಿಲ್ಲ. |
| ಈ | ಪ್ರಸ್ತುತ ತಂತ್ರಜ್ಞಾನಗಳನ್ನು ಬಳಸಿ ಕ್ರಷರ್‌ಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಶಬ್ದ ಮತ್ತು ವಾಯುಮಾಲಿನ್ಯವನ್ನು ತಡೆಗಟ್ಟಬಹುದಾಗಿದ್ದು, ಜನವಸತಿ ಪ್ರದೇಶಗಳಿಂದ ಅಂತರವನ್ನು 500 ಮೀಟರ್ ನಿಂದ 250 ಮೀಟರ್‌ಗೆ ಇಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಇಲ್ಲವಾದಲ್ಲಿ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು) | ಯಾವುದೇ ಪ್ರಸ್ತಾವನೆ ಇರುವುದಿಲ್ಲ.<br><br>ಮಾನ್ಯ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ-17078/1997 ಶ್ರೀ.ಓಬಯ್ಯ ಪೂಜಾರಿ V/s. ಆನಂದ ಭಂಡಾರಿ ಪ್ರಕರಣದ ದಿನಾಂಕ:10-07-1998ರ ಆದೇಶದಲ್ಲಿ ಸ್ಟೋನ್ ಕ್ರಷರ್ ಘಟಕಗಳ ಸ್ಥಾಪನೆ ಮತ್ತು ಕಾರ್ಯಾಚರಣೆಗೆ ನೀಡಿರುವ ಮಾರ್ಗಸೂಚಿಗಳನುಸಾರ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ-2011 ನ್ನು ಜಾರಿಗೆ ತರಲಾಗಿದೆ. ಉಪ ಪ್ರಶ್ನೆ (ಆ) ರಲ್ಲಿ ಉತ್ತರಿಸಿರುವಂತೆ ಸ್ಟೋನ್ ಕ್ರಷರ್ ಘಟಕಗಳ ಸ್ಥಾಪನೆಗೆ ಜನವಸತಿ ಪ್ರದೇಶಗಳಿಂದ ಕಾಯ್ದಿರಿಸಬೇಕಾದ ಅಂತರವನ್ನು ನಿಗಧಿಪಡಿಸಲಾಗಿದೆ. |

**ಸಂಖ್ಯೆ:** ಸಿಐ -ಎಂಎಂಎನ್/37/2026

(signature)

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.